ಸಾಕ್ಷಿಯನ್ನು ದಿಃ26.08.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀ ಜಿ ಸಿ ಎಂ ವಕೀಲರಿಂದಃ**

ಪ್ರತಿವಾದಿಯರು ಈ ದಾವೆಯಲ್ಲಿ ಅವರ ಪರವಾಗಿ ಏನು ದಾಖಲೆ ಹಾಕಿದ್ದಾರೆ ಎಂದು ವಕೀಲರ ಮೂಖಾಂತರ ತಿಳಿದುಕೊಂಡಿದ್ದೇನೆ. ಆದರೆ ಆ ದಾಖಲೆ ನೋಡಿರುವುದಿಲ್ಲ. ಸಮುದ್ರದಳ್ಳಿ ಗ್ರಾಮದಲ್ಲಿ ನಮ್ಮ ಕುಟುಂಬಕ್ಕೆ ಸೇರಿದ ಸರ್ವೆ ನಂ.222 ಇತ್ತು ಅನ್ನುವುದು ನಿಜ. ಸದರಿ ಜಮೀನು ತಿಮ್ಮಪ್ಪನ ಮಕ್ಕಳು ಮತ್ತು ಭದ್ರಪ್ಪ ಸೇರಿ ಮಾರಾಟ ಮಾಡಿರುವ ವಿಷಯ ನನ್ನ ತಂದೆಯಿಂದ ತಿಳಿದುಕೊಂಡಿದ್ದೇನೆ . ಸದರಿ ಜಮೀನು ಮರಾಟ ಮಾಡಿ ನನ್ನ ತಂದೆ ಆ ಹಣ ಪಡೆದುಕೊಂಡಿದ್ದಾರೆ ಅನ್ನುವುದು ಸರಿಯಲ್ಲ. ಮಾರಾಟ ಮಾಡಿರುವ ಸದರಿ ಜಮೀನಿನ ಚಕ್ಕುಬಂದಿ ನನಗೆ ಗೊತ್ತಿಲ್ಲ, ಏಕೆಂದರೆ ಆ ಜಮೀನು ನಾನು ನೋಡಿಲ್ಲ. ನಿಡಿ-6 ಅಂದರೆ ಆ ಜಮೀನಿನ ಕ್ರಯ ಪತ್ರ ನಾನು ನೋಡಿಲ್ಲ. ಸಾಕ್ಷಿಗೆ ನಿಡಿ-6 ರ ದಾಖಲೆ ತೋರಿಸಲಾಗಿ ಸದರಿ ಕ್ರಯ ಪತ್ರದಲ್ಲಿ ಮಾರಾಟ ಮಾಡಿರುವ ಜಮೀನಿನ ದಕ್ಷಿಣ ದಿಕ್ಕಿಗೆ ಗಿರಿಯಮ್ಮನ ಜಮೀನು ಇದೆ ಎಂದು ನಮೂದಾಗಿದೆ ಅನ್ನುವುದು ನಿಜ ಎಂದು ಹೇಳುತ್ತಾರೆ. ಆದರೆ ಸಮುದ್ರದಳ್ಳಿ ಗ್ರಾಮದ 222 ಜಮೀನು ದಾಸಪ್ಪನ ಮಗಳು ಗಿರಿಯಮ್ಮ ಮಾರಾಟ ಮಾಡಿದ್ದ ವಿಷಯ ಗೊತ್ತಿಲ್ಲ. ಸಾಕ್ಷಿಗೆ ನಿಡಿ-5 ಕ್ರಯ ಪತ್ರ ತೋರಿಸಿ ದಾಸಪ್ಪನ ಮಗಳು ಗಿರಿಯಮ್ಮ ಮಾರಾಟ ಮಾಡಿರುವ ಜಮೀನಿನ ದಾಖಲೆ ಇದೇನಾ ಎಂದು ಕೇಳಿದಾಗ ಅದನ್ನು ಕೂಲಂಕೂಷವಾಗಿ ನೋಡಿ ಹೌದು ಎಂದು ತಿಳಿಸುತ್ತಾರೆ. ನಿಡಿ-5 ರ 2 ನೇ ಪುಟದಲ್ಲಿ ನನಗೆ ದಿಃ22.05.1953 ರಲ್ಲಿ ವಿಲ್ ಪತ್ರದ ನಂಬರ್ 7 ರ ಪ್ರಕಾರ ನರಸಮ್ಮನವರಿಂದ ಬಂದ ಸ್ವತ್ತು ಎಂದು ನಮೂದಿಸಿದ್ದು ನಿಜ. ನಾನು ಹಾಕಿರುವ ಮಧ್ಯಂತರ ಅರ್ಜಿ 6 ರ ಪ್ರಕಾರ ದಾಸಪ್ಪನವರಿಗೆ ವಾರಸುದಾರರು ಇದ್ದಾರೆ ಎಂದು ತಿಳಿಸಿದ್ದೇನೆ ಎಂದರೆ ಸಾಕ್ಷಿ ತಾನು ಹೇಳಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ

ಮಧ್ಯಂತರ ಅರ್ಜಿ ಸಂಖ್ಯೆ 6 ರ ಜೊತೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿರುವ ಸಹಿಯನ್ನು ತೋರಿಸಿದಾಗ ಸದರಿ ಸಹಿಗಳನ್ನು ಸಾಕ್ಷಿ ಒಪ್ಪಿಕೊಂಡಿದ್ದರಿಂದ ಪ್ರಮಾಣ ಪತ್ರವನ್ನು ನಿಡಿ72 ಎಂದು ಸಹಿಗಳನ್ನು ನಿಡಿ-72(ಎ) ಮತ್ತು ನಿಡಿ-72(ಬಿ) ಎಂದು ಗುರುತಿಸಲಾಯಿತು. ಸದರಿ ಪ್ರಮಾಣ ಪತ್ರದಲ್ಲಿ ದಾಸಪ್ಪನ ವಾರಸುದಾರರು ಮಧ್ಯಂತರ ಅರ್ಜಿ 6 ರಲ್ಲಿ ಹೇಳಿರುವಂತೆ ತಿಪ್ಪೇಸ್ವಾಮಿ ಮತ್ತು ಮಂಜಮ್ಮ ಎಂದು ಹೇಳಿದ್ದೇನೆ ಎಂದರೆ ಸುಳ್ಳು. ಅದೇ ದಿನ ಮಧ್ಯಂತರ ಅರ್ಜಿ ಸಂಖ್ಯೆ 7 ರ ಪ್ರಕಾರ ದಾಸಪ್ಪನ ಇತರೆ ವಾರಸುದಾರರು ನಾವು ಎಂದು ಅವರು ಪಾರ್ವತಮ್ಮ , ಲಕ್ಷ್ಮಮ್ಮಕ್ಕ @ ಪುಟ್ಟೀರಮ್ಮ, ಬಸವರಾಜು, ಮಂಜುಳ , ರಾಧ , ಶಿವಮ್ಮ, ಸುಮಿತ್ರಮ್ಮ ಅಂದರೆ ಈ ದಾವೆಯ ಪ್ರತಿವಾದಿ ಸಂಖ್ಯೆ 13 ರಿಂದ 19 ಎಂದರೆ ಸುಳ್ಳು. ಅದೇ ರೀತಿ ನಾನು ಹಾಕಿರುವ ಮಧ್ಯಂತರ ಅರ್ಜಿ 6 ರಲ್ಲಿ ದಾಸಪ್ಪನ ವಾರಸುದಾರರು ಈಗಾಗಲೇ ಪ್ರತಿವಾದಿ 11 ಮತ್ತು 12 ಎಂದು ದಾವೆಯಲ್ಲಿ ಸೇರಿದ್ದಾರೆ ಎಂದರೆ ಸುಳ್ಳು. ಸದರಿ ಮಧ್ಯಂತರ ಅರ್ಜಿ 7 ಕ್ಕೆ ನಮ್ಮ ವಕೀಲರ ಮೂಲಕ ತಕಾರರು ಸಲ್ಲಿಸಿದ್ದೇನೆ. ಆದರೆ ತಕರಾರು ಹಾಕದೇ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅರ್ಜಿ ಸಂಖ್ಯೆ 6 ಮತ್ತು 7 ನ್ನು ಈ ನ್ಯಾಯಾಲಯದಲ್ಲಿ ಆದೇಶವಾದ ನಂತರ ನಾವು ದಾವಾ ಪತ್ರವನ್ನು ತಿದ್ದುಪಡಿ ಮಾಡಿ ಪ್ರತವಾದಿ 11 ರಿಂದ 19 ನ್ನು ಸೇರಿಸಿದ್ದೇವೆ ಎಂದರೆ ನಿಜ. ಪ್ರತಿವಾದಿ 11 ರಿಂದ 19 ದಾಸಪ್ಪನ ವಾರಸುದಾರರಲ್ಲ ಎಂದು ಮತ್ತು ಅರ್ಜಿ ಸಂಖ್ಯೆ 6 ಮತ್ತು 7 ರ ಮೇಲೆ ಆಗಿರುವ ಆದೇಶವನ್ನು ಪ್ರಶ್ನಿಸಿ ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ .

ದಾಸಪ್ಪನಿಗೆ ವಾರಸುದಾರರು ಇದ್ದಾರೆ. ದಾಸಪ್ಪನ ವಾರಸುದಾರರು ಇದ್ದಾಗ ನನಗೆ ಆತನ ಸ್ವತ್ತಿನಲ್ಲಿ ಯಾವುದೇ ಹಕ್ಕು ಬರುವುದಿಲ್ಲ ಅನ್ನುವುದು ನಿಜ. ದಾಸಪ್ಪನಿಗೆ ನರಸಮ್ಮ ಎನ್ನುವ ಹೆಂಡತಿ ಇದ್ದಳು ಅನ್ನುವುದು ನಿಜ. ಸದರಿ ನರಸಮ್ಮ ತನ್ನ ಭಾಗಕ್ಕೆ ಬಂದ ಆಸ್ತಿಯನ್ನು ದಾಸಪ್ಪ ಮೃತಪಟ್ಟ ನಂತರ ಈರಪ್ಪನ ಮಗ ರಂಗಪ್ಪನಿಗೆ ಮತ್ತು ತಿಮ್ಮಪ್ಪನ ಮಗ ಗಿರಿಯಪ್ಪನಿಗೆ ವಿಲ್ ಮುಖಾಂತರ

ದಿಃ22.05.1953 ರಲ್ಲಿ ಕೊಟ್ಟಿದ್ದರು ಎಂದರೆ ಸುಳ್ಳು. ಸದರಿ ವಿಲ್ ಪ್ರಕಾರ ದಾಸಪ್ಪನ ಭಾಗದ 9 ಎಕರೆ ಜಮೀನಿನಲ್ಲಿ ರಂಗಪ್ಪ ಮತ್ತು ಗಿರಿಯಪ್ಪನಿಗೆ ಮತ್ತು ಹಿರಿಯ ಮಗಳು ಗಿರಿಯಮ್ಮಳಿಗೆ ಸಮುದ್ರದಳ್ಳಿ ಗ್ರಾಮದ ಸರ್ವೆ ನಂ.222 ಬರೆದುಕೊಟ್ಟಿದ್ದಾಳೆ ಎಂದರೆ ಸುಳ್ಳು. ಆ ರೀತಿ ವಿಲ್ ನಲ್ಲಿ ಬಂದ ಆಸ್ತಿಯನ್ನು ಗಿರಿಯಮ್ಮ 22.10.1983 ರಲ್ಲಿ ಒಪ್ಪಿ ಹೊರಕೇರಪ್ಪನಿಗೆ ಮಾರಾಟ ಮಾಡಿದ್ದಾಳೆ ಎಂದರೆ ಸುಳ್ಳು. ಸಾಕ್ಷಿ ಪುನಃ ಗೊತ್ತಿಲ್ಲ ಎಂದು ಹೇಳುತ್ತಾರೆ.

ಸರ್ವೆ ನಂ.43 ಮ್ಯಾಗನಹೊಳೆ ಗ್ರಾಮದ ಆಸ್ತಿ ನಮ್ಮ ಕುಟುಂಬಕ್ಕೆ ಸೇರಿತ್ತು ಎಂದರೆ ನಿಜ. ಸದರಿ ಜಮೀನಿನ ಪಕ್ಕದಲ್ಲಿ ನನ್ನ ತಾಯಿಗೆ ಸೇರಿದ 1 ಎಕರೆ ಜಮೀನು ಇತ್ತು ಎಂದರೆ ನಿಜ. ಆ ಜಮೀನಿಗೆ ಹೊಂದಿಕೊಂಡು ತನಗೆ ಭಾಗ ಕೊಡಬೇಕೆಂದು ನನ್ನ ತಂದೆ ಸರ್ವೆ ನಂ.43/2 ರಲ್ಲಿ 3 ಎಕರೆ ಭಾಗ ಪಡೆದುಕೊಂಡಿದ್ದಾರೆ ಅನ್ನುವುದು ನಿಜ.

**(ಈ ಹಂತದಲ್ಲಿ ಸಾಕ್ಷಿಯು ತನ್ನಆರೋಗ್ಯ ಸರಿ ಇಲ್ಲವೆಂದು ತಿಳಿಸಿದ್ದು ಮತ್ತು ಶ್ರೀ ಜಿ ಸಿ ಎಂ ವಕೀಲರು ಪಾಟೀ ಸವಾಲು ಇನ್ನೂ ಬಹಳ ಇದೆ ಎಂದು ತಿಳಿಸಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು)**

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.